**ಸಾಕ್ಷಿಯನ್ನು ದಿಃ 24.03.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು ಕೊಡವ ಜನಾಂಗಕ್ಕೆ ಸೇರಿದವನು.

2. ಪ್ರತಿವಾದಿ ಕೃಷ್ಣ ನಾಯಕ ರವರು ನಾಯಕ ಜನಾಂಗಕ್ಕೆ ಸೇರಿದವರು ಎಂದರೆ ಸರಿ.

3. ಪ್ರತಿವಾದಿಯು ಗೋಣಿಕೊಪ್ಪ ರಸ್ತೆಯಲ್ಲಿ 15 ವರ್ಷಗಳಿಂದ ಬೇಕರಿ ಇಟ್ಟಾಗಿನಿಂದ ನನಗೆ ಪರಿಚಯ ಇದ್ದಾರೆ.

4. ಪಿರಿಯಾಪಟ್ಟಣದಿಂದ ಗೋಣಿಕೊಪ್ಪಕ್ಕೆ ಹೋಗುವ ರಸ್ತೆಯಲ್ಲಿ ಎಡಬದಿಗೆ ಅವರ ಬೇಕರಿ ಇರುತ್ತದೆ. ಅವರು ಬೇಕರಿ ನಡೆಸುತ್ತಿರುವ ಕಟ್ಟಡದ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ.

5. ನೀವು ಹೇಳುವಂತೆ ಪಿರಿಯಾಪಟ್ಟಣದಿಂದ ಗೋಣಿಕೊಪ್ಪಕ್ಕೆ ಹೋಗುವ ರಸ್ತೆಯಲ್ಲಿ ಎಡಬದಿಗೆ ಯಾವುದೇ ಬೇಕರಿ ಇರುವುದಿಲ್ಲ ಎಂದರೆ ಸರಿಯಲ್ಲ.

6. ಸದರಿ ಬೇಕರಿ ಬೆಟ್ಟದಪುರ ಸರ್ಕಲ್ ನಿಂದ ಹೈಸ್ಕೂಲ್ ಆದ ನಂತರ ಇದೆ.

7. ಹೈಸ್ಕೂಲ್ ನಿಂದ ಪುಷ್ಪ ಕಾನ್ವೆಂಟ್ ವರೆಗೆ 15 ವರ್ಷಗಳಿಂದ ಯಾವುದೇ ಅಂಗಡಿ ಮಳಿಗೆಗಳು ಇಲ್ಲ ಎಂದರೆ, ನನಗೆ ನೆನಪಿರುವಂತೆ ಇತ್ತು ಎಂದು ನುಡಿಯುತ್ತಾರೆ.

8. ಗೋಣಿಕೊಪ್ಪ ರಸ್ತೆಯಲ್ಲಿ ಬೇಕರಿ ಇರಲಿಲ್ಲ, ಆದರೆ ಪ್ರತಿವಾದಿಯ ಪತ್ನಿ ಸುಕನ್ಯಾ ಎಂಬುವವರು ಟೀ ಅಂಗಡಿ ಇಟ್ಟುಕೊಂಡಿದ್ದರು ಎಂದರೆ, ನನಗೆ ಗೊತ್ತಿಲ್ಲ.

9. ಪ್ರತಿವಾದಿ ಪರಿಚಯವಾದ ನಂತರ ಅವರ ಪತ್ನಿ ಸುಕನ್ಯಾರವರ ಪರಿಚಯವಾಗಿರುತ್ತಾರೆ.

10. ಪ್ರತಿವಾದಿಯು ಮದುವೆಯಾಗುವ ಮುಂಚಿನಿಂದಲೂ ಸಹ ಸುಕನ್ಯಾ ರವರು ಟೀ ಅಂಗಡಿ ಇಟ್ಟುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

11. ಪ್ರತಿವಾದಿಯು ಸುಕನ್ಯಾ ರವರನ್ನು ವಿವಾಹವಾಗುವ ಮುಂಚಿನಿಂದಲೂ ಸಹ ನಿಮಗೆ ಸುಕನ್ಯಾ ರವರ ಪರಿಚಯ ಇತ್ತು ಎಂದರೆ ಸರಿಯಲ್ಲ.

12. ನಾನು ದಾವಾ ಸ್ವತ್ತನ್ನು ಸುಮಾರು 15 ವರ್ಷಗಳಿಂದ ಪ್ರತಿವಾದಿ ಪರಿಚಯವಾದಾಗಿನಿಂದ ನೋಡುತ್ತಿದ್ದೇನೆ. ಸದರಿ ಸ್ವತ್ತು 15 ವರ್ಷಗಳ ಹಿಂದಿನಿಂದಲೂ ಸಹ ಅಸ್ತಿತ್ವದಲ್ಲಿದೆ.

13. ಪ್ರತಿವಾದಿಯ ಪರಿಚಯವಾದ ನಂತರ ದಾವಾ ಸ್ವತ್ತಿಗೆ ಹೋಗಿ ಬಂದು ಮಾಡುತ್ತಿದ್ದಿರಾ ಎಂದರೆ, ಅವರ ಸಭೆ ಸಮಾರಂಭಗಳಿದ್ದರೆ ಹೋಗಿ ಬಂದು ಮಾಡುತ್ತಿದ್ದೆ. ಸದರಿ ಸಮಾರಂಭಗಳಿಗೆ ಕೃಷ್ಣನಾಯಕರೆ ಕರೆಯುತ್ತಿದ್ದರು.

14. 10 ವರ್ಷದಿಂದ ಈಚೆಗೆ ಪ್ರತಿವಾದಿಯ ಮನೆಯ ಸಮಾರಂಭಗಳಿಗೆ ನೀವು ಭಾಗವಹಿಸಿದ್ದೀರಾ ಎಂದರೆ, ನನಗೆ ನೆನಪಿಲ್ಲ.

15. ಸಾಕ್ಷಿಗೆ ಒಂದು ಪೋಟೋ ತೋರಿಸಿದ್ದು, ಅದರಲ್ಲಿ ನಾನು, ನನ್ನ ಪತ್ನಿ ಹಾಗೂ ಸುಕನ್ಯಾರವರು ಇದ್ದಾರೆ ಎಂದರೆ ಸರಿ. ಸದರಿ ಪೋಟೋ ತೆಗೆಯುವ ಕಾಲದಲ್ಲಿ ನಿಮಗೆ ಇನ್ನೂ ಮದುವೆಯಾಗಿರಲಿಲ್ಲ ಎಂದರೆ ಸರಿ. ಸದರಿ ಪೋಟೋವನ್ನು ನಿಡಿ - 1 ಎಂದು ಗುರುತಿಸಲಾಯಿತು.

16. ಸದರಿ ಪೋಟೋವನ್ನು ನಿಮ್ಮ ಪತ್ನಿಯ ಆರತಿ ಶಾಸ್ತ್ರದಲ್ಲಿ ತೆಗೆದಿರುವುದು ಎಂದರೆ ಸರಿ. ಸದರಿ ಪೋಟೋವನ್ನು 2013 ರಲ್ಲಿ ತೆಗೆದಿರಬಹುದು. ಸದರಿ ಪೋಟೋವನ್ನು ಪ್ರತಿವಾದಿ ಕೃಷ್ಣನಾಯಕ ರವರೇ ಅವರ ಸ್ನೇಹಿತರ ಕ್ಯಾಮರಾದಲ್ಲಿ ತೆಗೆದಿರುತ್ತಾರೆ.

17. ಸಾಕ್ಷಿಗೆ ಇನ್ನೊಂದು ಪೋಟೋವನ್ನು ತೋರಿಸಿದ್ದು, ಸದರಿ ಪೋಟೋವನ್ನು ಸಹ ಅದೇ ದಿನ ತೆಗೆದಿದ್ದು ಎಂದರೆ ಸರಿ. ಸದರಿ ಪೋಟೋವನ್ನು ನಿಡಿ - 2 ಎಂದು ಗುರುತಿಸಲಾಯಿತು.

18. ಸಾಕ್ಷಿಗೆ ಇನ್ನೊಂದು ಪೋಟೋವನ್ನು ತೋರಿಸಿದ್ದು, ಸದರಿ ಪೊಟೋದಲ್ಲಿ ನನ್ನ ತಾಯಿ, ನನ್ನ ಪತ್ನಿ, ಸುಕನ್ಯಾ ಹಾಗೂ ಸುಕನ್ನಾರವರ ತಾಯಿ ಇದ್ದಾರೆ ಎಂದರೆ ಸರಿ. ಸದರಿ ಪೋಟೋವನ್ನು ನಿಡಿ - 3 ಎಂದು ಗುರುತಿಸಲಾಯಿತು.

19. ಸದರಿ ಪೋಟೋಗಳನ್ನು ತೆಗೆಸಿದಾಗ ನಿಮ್ಮ ಪತ್ನಿಗೆ ಅಂದಾಜು ಎಷ್ಟು ವರ್ಷ ಇರಬಹುದು ಎಂದರೆ, ಅಂದಾಜು 14 ವರ್ಷ ಇರಬಹುದು.

20. ನಿಡಿ - 2ರ ಪೋಟೊದಲ್ಲಿ ನೀವು ನಿಮ್ಮ ಪತ್ನಿಯ ಹೆಗಲ ಮೇಲೆ ಕೈ ಹಾಕಿ ಪೋಟೋ ತೆಗೆಸಿದ್ದೀರಾ ಎಂದರೆ ಸರಿ.

21. ನನ್ನ ಪತ್ನಿಯ ಹೆಸರು ಅನುಶ್ರೀ.

22. ದಾವಾ ಸ್ವತ್ತು ಮಾಲಂಗಿ ಗ್ರಾಮ ಪಂಚಾಯತಿಗೆ ಸೇರಿತ್ತು.

23. ದಾವಾ ಸ್ವತ್ತನ್ನು ನಿರ್ಮಿಸಬೇಕಾದರೆ ಮಾಲಂಗಿ ಗ್ರಾಮ ಪಂಚಾಯತಿಯಿಂದ ಪರವಾನಿಗೆ ಪಡೆದಿದ್ದಾರಾ ಎಂದರೆ, ನನಗೆ ಗೊತ್ತಿಲ್ಲ.

24. ದಾವಾ ಸ್ವತ್ತಿನ ಬಗ್ಗೆ ಪೂರ್ಣವಾದ ಮಾಹಿತಿಯನ್ನು ನನಗೆ ಕೃಷ್ಣನಾಯಕರು ಕೊಟ್ಟಿದ್ದಾರೆ.

25. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ನಿಮಗೆ ಅವರ ಪತ್ನಿ ಸುಕನ್ಯಾ ರವರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

26. ದಿಃ 25.07.2013 ರಂದು ಕೃಷ್ಣನಾಯಕರು ಹಾಗೂ ಅವರ ಪತ್ನಿ ಸುಕನ್ಯಾ ರವರ ನಡುವೆ ವೈಮಸ್ಸು ಉಂಟಾಗಿದ್ದರಿಂದ, ಕೃಷ್ಣನಾಯಕರು ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

27. ನಿಮ್ಮ ಹಾಗೂ ಸುಕನ್ಯಾ ರವರ ಒಡನಾಟದಿಂದ ಬೇಸತ್ತು ಕೃಷ್ಣನಾಯಕರು 2013 ರಿಂದ ಅವರ ಮನೆ ಬಿಟ್ಟು ಅವರ ಗ್ರಾಮವಾದ ಹುಲಿಕಲ್ ಗೆ ಹೋಗಿ ನೆಲೆಸಿದ್ದರು ಎಂದರೆ ಸರಿಯಲ್ಲ.

28. ನೀವು ಮತ್ತು ಸುಕನ್ಯಾ ರವರು ನಿಪಿ - 1ರ ಕರಾರು ಪತ್ರಕ್ಕೆ ಸಹಿ ಹಾಕಿದರೆ, ಬಿಡುಗಡೆ ಮಾಡುವುದಾಗಿ ಪ್ರತಿವಾದಿಯ ಮೇಲೆ ಅನುಚಿತ ಪ್ರಭಾವ ಬೀರಿ ಅವರಿಂದ ಸಹಿ ಪಡೆದಿದ್ದೀರಾ ಎಂದರೆ ಸರಿಯಲ್ಲ.

29. ದಾವಾ ಸ್ವತ್ತಿನ ಖಾಲಿ ನಿವೇಶನದ ಕಂದಾಯ ದಾಖಲಾತಿಗಳು ಯಾರ ಹೆಸರಿನಲ್ಲಿದ್ದವು ಎಂದರೆ, ಅಲ್ಲಿ ಮೊದಲಿನಿಂದಲೂ ಮನೆಯೇ ಇತ್ತು ಎಂದು ನುಡಿಯುತ್ತಾರೆ.

30. ದಾವಾ ಸ್ವತ್ತಿನಲ್ಲಿ ಮಣ್ಣಿನ ಗೋಡೆಯ ಒಂದು ನಾಡ ಹೆಂಚಿನ ಮನೆ ಇದ್ದು, ಈಗ ಇರುವ ಮನೆ ಇರಲಿಲ್ಲ ಎಂದರೆ, ಸಾಕ್ಷಿಯು 2013 ರಲ್ಲಿ ಈಗ ಇರುವ ಮನೆ ಇತ್ತು ಎಂದು ನುಡಿಯುತ್ತಾರೆ.

31. 2012 ರಲ್ಲಿ ಸದರಿ ಹೆಂಚಿನ ಮನೆ ಕೆಡವಿ ಪ್ರತಿವಾದಿಯು ದಾವಾ ಸ್ವತ್ತನ್ನು ಕಟ್ಟಿರುತ್ತಾರೆ ಎಂದರೆ, ನನಗೆ ಗೊತ್ತಿಲ್ಲ.

32. ನಿಮ್ಮ ಹಾಗು ಸುಕನ್ಯಾ ರವರ ಒಡನಾಟಕ್ಕೆ ಅನುಕೂಲವಾಗಲಿ ಎಂದು ಸದರಿ ಮನೆಯಿಂದ ಪ್ರತಿವಾದಿಯನ್ನು ಖಾಲಿ ಮಾಡಿಸುವ ಉದ್ದೇಶಕ್ಕಾಗಿ ನೀವಿಬ್ಬರೂ ಸಂಚು ಮಾಡಿ, ಕರಾರು ಪತ್ರಕ್ಕೆ ಸಹಿ ಮಾಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

33. ಸದರಿ ಕರಾರು ಪತ್ರಕ್ಕೆ ಸಹಿ ಮಾಡದಿದ್ದರೆ, ಪ್ರತಿವಾದಿಯ ವಿರುದ್ಧ ಡೆತ್ ನೋಟ್ ಬರೆದು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಸುಕನ್ಯಾ ರವರು ಹೆದರಿಸಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನೀವು ಸುಕನ್ಯಾರವರಿಗೆ ಪ್ರಚೋದನೆ ಮಾಡಿದ್ದೀರಾ ಎಂದರೆ ಸರಿಯಲ್ಲ.

34. ನಿಪಿ - 1ರ ಕರಾರು ಪತ್ರ ಮಾಡುವ ಸಮಯದಲ್ಲಿ ನಾನು ದಾವಾ ಸ್ವತ್ತಿನ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ರೀತಿ ನೀವು ಯಾವುದೇ ಸದರಿ ರೆವಿನ್ಯೂ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

35. ಈ ದಾವೆ ಹಾಕುವ ಮುಂಚೆ ಪ್ರತಿವಾದಿಗೆ 2 ತಿಳುವಳಿಕೆ ನೀಡಿರುತ್ತೇನೆ. ಹುಲಿಕಲ್ ಹಾಗೂ ಹುಣಸೆಕುಪ್ಪೆ ಎರಡೂ ವಿಳಾಸಕ್ಕೆ ಕಳುಹಿಸಿದ್ದೇನೆ. 2018 ರಲ್ಲಿ ಪ್ರತಿವಾದಿಯು ಹುಣಸೆಕುಪ್ಪೆಯಲ್ಲಿ ಇರಲಿಲ್ಲ.

36. 2018 ರಲ್ಲಿ ಹುಣಸೆಕುಪ್ಪೆ ಗ್ರಾಮದಲ್ಲಿ ಪ್ರತಿವಾದಿ ವಾಸವಾಗಿಲ್ಲ ಎಂಬ ವಿಚಾರ ನಿಮಗೆ ಗೊತ್ತಿತ್ತು ಎಂದರೆ, ಅವರ ಪತ್ನಿ ಸುಕನ್ಯಾ ರವರು ಸದರಿ ವಿಚಾರ ತಿಳಿಸಿದ್ದರು ಎಂದು ನುಡಿಯುತ್ತಾರೆ. ಹುಲಿಕಲ್ ವಿಳಾಸಕ್ಕೆ ಕಳುಹಿಸಿದ ನೊಟೀಸು ಪ್ರತಿವಾದಿಗೆ ಜಾರಿಯಾಗಿರುತ್ತದೆ. ಸದರಿ ನೊಟೀಸಿಗೆ ಪ್ರತಿವಾದಿ ಪ್ರತ್ಯುತ್ತರ ನೊಟೀಸು ನೀಡಿದ್ದರು ಎಂದರೆ ಸರಿ. ಅದು ಯಾವ ದಿನಾಂಕ ಎಂದು ನನಗೆ ಗೊತ್ತಿಲ್ಲ.

37. ನಿಪಿ - 5ರ ಸ್ವೀಕೃತಿ ಹುಣಸೆಕುಪ್ಪೆ ಹಾಗೂ ನಿಪಿ - 6ರ ಸ್ವೀಕೃತಿ ಹುಲಿಕಲ್ ವಿಳಾಸಕ್ಕೆ ಜಾರಿಯಾಗಿರುವ ಬಗ್ಗೆ ಹಾಜರುಪಡಿಸಿರುತ್ತೇನೆ.

38. ಪ್ರತಿವಾದಿ ಪ್ರತ್ಯುತ್ತರದಲ್ಲಿ ಏನೇನು ಉತ್ತರ ನೀಡಿದ್ದಾರೆ ಎಂದರೆ, ನಮ್ಮ ವಕೀಲರಿಗೆ ಬಂದಿರಬೇಕು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ನಮ್ಮ ವಕೀಲರ ಮೂಲಕ ಪ್ರತ್ಯುತ್ತರದಲ್ಲಿ ಬರೆದ ವಿಚಾರಗಳನ್ನು ತಿಳಿದುಕೊಂಡಿದ್ದೇನೆ.

39. 2018 ರಲ್ಲಿ ದಾವಾ ಆಸ್ತಿಯ ಕಂದಾಯ ದಾಖಲೆಗಳು ಯಾರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

40. ಕ್ರಯ ಕರಾರು ಪತ್ರಕ್ಕೆ ಸಾಕ್ಷಿಗಳಾಗಿ ಮಹೇಶ ಬಿನ್ ಉರುಗನಾಯಕ, ಪರಿಸರ ಬಡಾವಣೆ, ಪಿರಿಯಾಪಟ್ಟಣ ಮತ್ತು ಪಿ.ಎನ್.ಕಸ್ತೂರಿ ಎಂಬುವವರು ಸಹಿ ಮಾಡಿದ್ದಾರೆ.

41. ಕರಾರು ಪತ್ರವನ್ನು ಮುರಳಿಧರ ರವರು ಬರೆದಿರುತ್ತಾರೆ. ಸದರಿ ಮುರಳಿಧ ರವರು ಪಿ.ಎನ್.ಕಸ್ತೂರಿ ಯವರ ಸಹೋದರ ಎಂದರೆ, ನನಗೆ ಗೊತ್ತಿಲ್ಲ. ಮುರಳಿಧರ ರವರ ಇನಿಷಿಯಲ್ ನನಗೆ ನೆನಪಿಲ್ಲ.

42. ಸದರಿ ಪಿ.ಎನ್.ಕಸ್ತೂರಿ ಹಾಗೂ ಮುರಳಿಧರ ಇಬ್ಬರೂ ಎಚ್.ಎನ್.ನಾರಾಯಣ ಮೂರ್ತಿ ರವರ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.

43. ನೀವು, ಪಿ.ಎನ್.ಕಸ್ತೂರಿ ಹಾಗೂ ಮುರಳಿಧರ ಶಾಮೀಲಾಗಿ ನಿಪಿ - 1ರ ಕರಾರು ಪತ್ರವನ್ನು ಸೃಷ್ಟಿಸಿದ್ದೀರಾ ಎಂದರೆ ಸರಿಯಲ್ಲ.

44. ಪ್ರತಿವಾದಿಗೆ ಬೆದರಿಕೆ ಹಾಕಿ ಸಹಿ ಪಡೆದ ಪತ್ರ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ನಿಪಿ- 1 ಅಲ್ಲ ಎಂದರೆ, ನಾವು ಯಾವುದೇ ಬೆದರಿಕೆ ಹಾಕಿಲ್ಲ ಎಂದು ನುಡಿಯುತ್ತಾರೆ.

45. ನಿಪಿ - 1ರಲ್ಲಿನ ಸಹಿ ಪ್ರತಿವಾದಿಯ ಸಹಿ ಅಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ